ಕಾಂಗ್ರೆಸ್ಸನ್ನು ಬಯ್ಯುವುದು ನಡೆಯುತ್ತಿತ್ತು.

ಹೀಗೆ ಒಬ್ಬ ಮನುಷ್ಯನನ್ನು ತತ್ತರಿಸಿ ಕುಸಿಯುವಂತೆ ಮಾಡುತ್ತಿದ್ದ ಅವರು ಅದೇ ಮನುಷ್ಯನ ಎದುರು ಪ್ರಾಯಶ್ಚಿತ್ತ ಮಾಡಿ, ಬೇಡಿಕೊಳ್ಳುವವರಂತೆ ಹಲ್ಲು ಗಿಂಜುತ್ತಾ, ದೈನ್ಯವಾಗಿ ಕಾಲು ಹಿಡಿದುಕೊಳ್ಳುವವರಂತೆ ನಟಿಸುತ್ತಿದ್ದರು.

ನಾನು ಏನನ್ನು ಬರವಣಿಗೆಯ ಮೂಲಕ ಒಪ್ಪಿಕೊಳ್ಳಲು ಸಿದ್ಧನಿದ್ದೆನೋ ಅದನ್ನು ಅವರು ಒಪ್ಪಿಕೊಳ್ಳಲು ಸಿದ್ಧರಿರುವಂತೆ ಕಂಡರು. ಆದರೂ ಇನ್ನಷ್ಟು ಹೇಳಲಿ ಎಂದು ಎರಡು ಹಗಲು, ಒಂದು ರಾತ್ರಿ ಪೀಡಿಸಿದರು; ಕಾಲು ಹಿಡಿದುಕೊಳ್ಳುವ ಆಟವನ್ನೂ ಮುಂದುವರಿಸಿದರು.

ಹಿಂದೆಲ್ಲ ನಾನು ಏನೇನು ಮಾತಾಡಿದ್ದೇನೆ, ಯಾವ ಯಾವ ಕರಪತ್ರ ಬರೆದಿದ್ದೇನೆ ಎಂಬ ಬಗ್ಗೆ ಅವರು ತಮ್ಮದೇ ಆದ ಟಿಪ್ಪಣಿ ಮಾಡಿಕೊಂಡಿದ್ದರು. ಅವುಗಳಲ್ಲಿ ನಾನು ಬರೆದಿದ್ದು, ಮಾತಾಡಿದ್ದು ಯಾವುದು ಎಂಬುದನ್ನು ನಾನೇ ಹುಡುಕಿ ತೋರಿಸಿಕೊಡುತ್ತಿದ್ದೆ. ಇದು ಆಗಸ್ಟ್ ತಿಂಗಳ ಮೊದಲ ವಾರದ ತನಕ ನಡೆಯಿತು.

ಇದರಿಂದ ಅವರಿಗೆ ಅಷ್ಟಿಷ್ಟು ಸಮಾಧಾನವಾದಂತಿತ್ತು; ಆದರೂ ಅವರಿಗೆ ಬೇಕಾದದ್ದು ಅದಾಗಿರಲಿಲ್ಲ. ಬಂಗಾಳ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಇಂಟೆಲಿಜೆನ್ಸ್ ವರದಿಗಳ ಕಂತೆಕಂತೆಗಳನ್ನೇ ಅವರು ನನಗೆ ಓದತೊಡಗಿದರು. ತಮ್ಮ ಬಳಿ ಎಷ್ಟೆಲ್ಲ ಮಾಹಿತಿಯಿದೆ ಎಂಬುದನ್ನು ನನಗೆ ತೋರಿಸಿ ಗಾಬರಿ ಹುಟ್ಟಿಸುವುದು ಅವರ ಉದ್ದೇಶವಾಗಿತ್ತು; ನಾನು ಆ ಮಾಹಿತಿಗಳ ಬಗ್ಗೆ 'ಹೌದು' ಅಥವಾ 'ಇಲ್ಲ' ಎಂದರೆ ಸಾಕಾಗಿತ್ತು. ಅವರ ಬಳಿ ಮಹತ್ವದ ಮಾಹಿತಿಗಳೇನೂ ಇರಲಿಲ್ಲ, ಅಥವಾ ಅವರಿಗೆ ಬಂದಿದ್ದ ಸುದ್ದಿಗಳು ತಪ್ಪಾಗಿದ್ದವು; ಎಷ್ಟೋ ವಿಷಯಗಳ ಬಗ್ಗೆ ಅವು ತೀರಾ ಸ್ಥೂಲವಾಗಿದ್ದವು.

ಇದನ್ನೆಲ್ಲ ತಮ್ಮ ಪತ್ತೇದಾರಿ ಕಲೆಯಿಂದ ಕಂಡು ಹಿಡಿದಿದ್ದೇವೆಂದು ಅವರು ಮತ್ತೆ ಮತ್ತೆ ಹೇಳಿಕೊಳ್ಳುತ್ತಿದ್ದರು. ಯಾವುದೋ ಭಯದಲ್ಲೋ, ಅಥವಾ ನಾನು ಮಾಡಿದ್ದನ್ನು ಎಲ್ಲಿ ಬೇಕಾದರೂ ಒಪ್ಪಿಕೊಳ್ಳಬಹುದು ಎಂಬ ಹುಂಬ ನಂಬಿಕೆಯಿಂದಲೋ ನಾನು ಕೆಲವು ಕೃತ್ಯಗಳನ್ನು ಒಪ್ಪಿಕೊಂಡೆ; ಕೆಲವು ಪ್ರಕರಣಗಳಲ್ಲಿ ಇತರರು ಭಾಗಿಯಾಗಿದ್ದ ವಿವರವೂ ಬಾಯಿ ತಪ್ಪಿ ಹೊರಬಿದ್ದಿತ್ತು.

ಆಗಸ್ಟ್ ತಿಂಗಳ ಆರಂಭದಲ್ಲಿ ಅವರು ಇನ್ನೊಂದು ರೀತಿಯ ಶಿಕ್ಷೆ ಕೊಟ್ಟರು: ಮಧ್ಯಾಹ್ನದಿಂದ ಮಧ್ಯರಾತ್ರಿಯ ತನಕ ನಾನು ಸುಮ್ಮನೆ ನಿಂತುಕೊಂಡೇ ಇರಬೇಕು. ನಡುವೆ ನಾಲ್ಕು ಗಂಟೆ ಬಿಡುವು. ನಾನಾಗಿ ನಾನೇ ಮೇಲೇಳದಿದ್ದರೆ ಇಬ್ಬರು ನನ್ನ ರಟ್ಟೆ ಹಿಡಿದು ಮೇಲೆಬ್ಬಿಸಿ ನಿಲ್ಲಿಸುತ್ತಿದ್ದರು. ಒಮ್ಮೆ ಇನ್‌ಸ್ಪೆಕ್ಟರ್ ನನ್ನ ಕನ್ನಡಕ ಕಿತ್ತುಕೊಂಡ. ನನ್ನ ಸಮೀಪ ದೃಷ್ಟಿ ಮೈನಸ್ ಐದರಷ್ಟಿತ್ತು. ನಾನು ಕಣ್ಣು ಮುಚ್ಚಿಕೊಂಡುಬಿಟ್ಟೆ. ಮತ್ತೆಂದೂ ಆತ ನನ್ನ ಕನ್ನಡಕ ಕಿತ್ತುಕೊಳ್ಳಲಿಲ್ಲ. ಅವತ್ತು ಕೂಡ ಆತ ಹಲ್ಲುಗಿಂಜಿ ನನ್ನನ್ನು ಬೇಡಿಕೊಂಡ. ಕೆಲವು ವಾರಗಳ ನಂತರ ನನ್ನ ಮೀನಖಂಡದ ಮೇಲೆ ಕಪ್ಪು ಕಲೆಗಳಾಗಿದ್ದುದನ್ನು ಕಂಡೆ.

ಆಗಸ್ಟ್ 10ರಿಂದ 30ರ ತನಕ ಪ್ರತಿ ದಿನ ತಪಾಸಣಾ ಕೊಠಡಿಗೆ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ಅವರ ಬಡಬಡಿಕೆ, ನನ್ನನ್ನು ಹಾಡಿ ಹೊಗಳುವುದು ಅಥವಾ ಮುಂದೆ ಭಯಂಕರವಾದ ಏನೋ ಒಂದು ಕಾದಿದೆ ಎಂದು ಬೆದರಿಸುವುದು ನಡೆಯುತ್ತಿತ್ತು. ನಾನು ಏನೂ ಹೇಳದಿದ್ದರೂ, ಹೇಳುವುದು ಏನೂ ಇಲ್ಲ ಎಂದರೂ, ತಮ್ಮ ಕಡತಗಳಿಂದ ಏನೋ ಒಂದನ್ನು ತೆಗೆದು ಓದುತ್ತಿದ್ದರು. ನನ್ನ ಬಾಯಿಯಿಂದ ಬ್ರಿಟಿಷರ ಶತ್ರು ರಾಷ್ಟ್ರಗಳ ಅಧ್ಯಕ್ಷರ, ರಾಯಭಾರ ಕಚೇರಿಗಳ ವಿವರಗಳು ಹೊರಬರಬಹುದು; ಆ ಮೂಲಕ ಭೂಗತ ಚಟುವಟಿಕೆಗಳ ಹಿಂದೆ ಅಂತರರಾಷ್ಟ್ರೀಯ ಕೈವಾಡ ಇರಬಹುದೆಂಬ ವರದಿ ತುರುಕಬಹುದು. ಈ ಥರದ ಉದ್ದೇಶ ಅವರಲ್ಲಿದ್ದಂತಿತ್ತು. ಆಗೆಲ್ಲ ನನ್ನೆದುರು ಸುಳಿಯುತ್ತಿದ್ದ ಒಂದು ಚಿತ್ರ: ನನ್ನ ಕಣ್ಣೆದುರು ಚರಂಡಿ ನೀರಿದೆ; ಇಂಟೆಲಿಜೆನ್ಸ್ ವಿಭಾಗದವರು ಅದನ್ನು ಕುಡಿಯಲೇಬೇಕೆಂದು ನನ್ನನ್ನು ಪೀಡಿಸುತ್ತಿದ್ದಾರೆ...

...ನನ್ನನ್ನು ಅವರು ಮಲಗಲೂ ಬಿಡುತ್ತಿರಲಿಲ್ಲ; ಸುಮ್ಮನೆ ಕಾಲು ನೀಡಿಕೊಳ್ಳಲೂ ಬಿಡುತ್ತಿರಲಿಲ್ಲ. ನನ್ನ ಕಣ್ಣ ರೆಪ್ಪೆಗಳು ಭಾರವಾಗಿ ಕಣ್ಣು ಮುಚ್ಚಿಕೊಂಡರೆ ಕಾನ್‌ಸ್ಟೆಬಲ್‌ಗಳು ನನ್ನ ತಲೆ ಹಿಡಿದು ಅಲ್ಲಾಡಿಸಲು ಶುರು ಮಾಡುತ್ತಿದ್ದರು...

ಬರಬರುತ್ತಾ ಇನ್‌ಸ್ಪೆಕ್ಟರ್ 'ಸೂಳೇಮಗನೆ' ಮುಂತಾದ ಹೊಲಸು ಬೈಗುಳಗಳನ್ನು ಹೆಚ್ಚಿಸತೊಡಗಿದ. ಸೆಪ್ಟೆಂಬರ್ 23ರಂದು ಅವನು ನನ್ನನ್ನು 'ಏಳು ಮೇಲೆ' ಅಂದ. ತಕ್ಷಣ ನಾನು 'ನೀನೊಬ್ಬನೇ ಇದ್ದಾಗ ನನ್ನ ಹತ್ರ ಆಟ ಆಡಬೇಡ' ಎಂದುಬಿಟ್ಟೆ. ಅವನು ಕಾನ್‌ಸ್ಟೆಬಲ್‌ಗಳು, ಪಹರೆಯವರು ಓಡೋಡಿ ಬರುವಂತೆ ಕಿರುಚಿಕೊಂಡ. ಇಬ್ಬರು ಓಡಿ ಬಂದು ನನ್ನ ತೋಳು ಹಿಡಿದುಕೊಂಡರು. ಇನ್‌ಸ್ಪೆಕ್ಟರ್ ಮತ್ತೆ ಹೊಲಸು ಬೈಗುಳ ಶುರು ಮಾಡಿದ. ಈ ಭಯೋತ್ಪಾದನೆ ಸಾಕುಸಾಕಾಗಿ ಹೋಗಿತ್ತು. ಸದಾ ಎಚ್ಚರವಾಗೇ ಇರುವುದು, ಅವರು ನನ್ನನ್ನು ಕಾಲ ಕಸದಂತೆ ಕಾಣುವುದು... ಇದೆಲ್ಲ ನನ್ನಲ್ಲಿ ಕ್ರೋಧ ಹುಟ್ಟಿಸಿತ್ತು. ನನ್ನ ನಿಷ್ಕ್ರಿಯತೆ ಮೀರಿ ನಾನು ಸ್ವಾಭಿಮಾನದಿಂದ ಸಿಡಿದೇಳುವುದನ್ನು ನನ್ನ ಕಣ್ಣಾರೆ ನೋಡಬೇಕು ಎನ್ನಿಸತೊಡಗಿತು. 'ನಿನ್ನ ಭಯೋತ್ಪಾದನೆ, ಕೇಡಿ ಕೆಲಸ, ಶೌರ್ಯ ಪ್ರದರ್ಶನ... ಇವೆಲ್ಲ ಏನೇ ಇದ್ದರೂ, ಈ ಕೋಟೆಯ ಪರಮಹೇಡಿ ನೀನು' ಎಂದುಬಿಟ್ಟೆ.

ಥಕ್ಕನೆ ಸಬ್ ಇನ್‌ಸ್ಪೆಕ್ಟರೊಬ್ಬ ನನ್ನ ಕುತ್ತಿಗೆಗೆ ಕೈ ಹಾಕಿದ. ಇನ್ನೊಬ್ಬ ನನ್ನ ತಲೆ ಹಿಡಿದು ಪಟಪಟಪಟ ಅತ್ತಿತ್ತ ತಿರುಗಿಸಿದ. ಇನ್‌ಸ್ಪೆಕ್ಟರ್ ಆ ಇಬ್ಬರನ್ನೂ ಸುಮ್ಮನಿರಿಸಿದ. ಅಲ್ಲಿಂದ ಸ್ವಲ್ಪ ದಿನ ಆ ಒರಟು ಬೈಗುಳಗಳು ನಿಂತವು.'

ಪೊಲೀಸ್ ಇನ್‌ಸ್ಪೆಕ್ಟರ್ ಜೊತೆಗಿನ ಈ ಮುಖಾಮುಖಿ ಕುರಿತು ಹದಿಮೂರು ವರ್ಷಗಳ ನಂತರ ಲೋಹಿಯಾ ಬರೆದರು:

'ನಿರಂತರ ನಿದ್ರೆಯಿಲ್ಲದ ಆ ಅವಧಿಗಳಲ್ಲಿ ನಾನು ಗಟ್ಟಿ ಆಹಾರವೇನನ್ನೂ ತೆಗೆದುಕೊಳ್ಳುತ್ತಿರಲಿಲ್ಲ; ಬೆಳಿಗ್ಗೆ ಒಂದು ಲೋಟ ಹಾಲು, ಸಂಜೆ ಒಂದು ಲೋಟ ಟೀ, ಇಷ್ಟಕ್ಕೇ ನಿಯಮಿತಗೊಳಿಸಿಕೊಂಡಿದ್ದೆ. ಆಗ ಮಾತ್ರವಲ್ಲ, ಅದಕ್ಕೆ ಮುಂಚೆಯೂ, ಹಿಂಸೆ ಕಡಿಮೆ ಇದ್ದಾಗ ಕೂಡ ಇದೇ ಅಭ್ಯಾಸವಾಗಿತ್ತು. ನನ್ನ ಬಂದೀಖಾನೆಯ ಕಬ್ಬಿಣದ ಬಾಗಿಲಿನ ಕೆಳಗಿಂದ ಆಹಾರವನ್ನು ತಂದು ಸುರಿಯುತ್ತಿದ್ದರು. ನಾನು ಅದನ್ನು ತಿನ್ನಲು ನಿರಾಕರಿಸಿದ್ದೆ. ಕೊಳಚೆ ನೀರಿಗೂ ಅದೇ ದಾರಿಯಾಗಿತ್ತು. ನನ್ನ ಇಂಥ ದೈಹಿಕ ಸ್ಥಿತಿಯಲ್ಲೂ ಆ ಅಧಿಕಾರಿ ಭಯದಿಂದ ತಲ್ಲಣಗೊಂಡುಬಿಟ್ಟಿದ್ದ.

ನಾನು ಪೊಲೀಸ್ ಅಧಿಕಾರಿಗೆ ಕೊಟ್ಟ 'ಪರಮಹೇಡಿ' ಎಂಬ ಬಿರುದು ಮುಂದೆ ಕೋಟೆಯ ತುಂಬ ಹಬ್ಬಿಬಿಟ್ಟಿತ್ತೆಂದು ಮುಂದೊಮ್ಮೆ ಒಬ್ಬ ಪೊಲೀಸನಿಂದ ನನಗೆ ತಿಳಿಯಿತು. ಇದಕ್ಕೆ ಕಾರಣ, ಆ ಅಧಿಕಾರಿ ತನ್ನ ಜನಗಳಿಗೂ ಕ್ರೂರಿಯೇ ಆಗಿದ್ದನಂತೆ. ನಾನು ಪುನಃ ಕಣ್ಣು ಮುಚ್ಚಿದೆ. ಆ ಅಧಿಕಾರಿ ನೆಲದ ಒರಟು ಹಾಸಿನ ಮೇಲೆ ನನ್ನನ್ನು ಸುತ್ತಿಸಿ ಸುತ್ತಿಸಿ ದರದರ ಎಳೆಸಿದ. ಇದು ಸುಮಾರು ಒಂದು ತಾಸು ನಡೆದಿರಬೇಕು; ನನ್ನ ಅಂಗೈ, ಮೊಳಕೈಗಳು ಅಲ್ಲಲ್ಲಿ ತರಿದಿದ್ದವು. ಅನಂತರ ನನ್ನನ್ನು ಬಚ್ಚಲಿಗೆ ಕರೆದೊಯ್ದರು. ಅದಾದ ಮೇಲೆ ಹಿಂಸೆ ಪುನಃ ಮುಂದುವರಿಯಿತು.'

ಲೋಹಿಯಾರ ಸೆರೆಮನೆಯ ಅನುಭವಗಳನ್ನು ನೋಡುತ್ತಿದ್ದರೆ, ವಸಾಹತುಶಾಹಿಯು ಆಫ್ರಿಕಾ, ಭಾರತದಂಥ ದೇಶಗಳನ್ನು ಬರ್ಬರ ಮಾನಸಿಕ, ದೈಹಿಕ ಹಿಂಸೆಗಳ ಕ್ರೂರ ಪ್ರಯೋಗಾಲಯಗಳನ್ನಾಗಿ ಮಾಡಿಕೊಂಡಿದ್ದ ರೀತಿ ಗೊತ್ತಾಗುತ್ತದೆ. ಬ್ರಿಟಿಷ್ ಸರ್ಕಾರದಡಿ ಕೆಲಸ ಮಾಡುತ್ತಿದ್ದ ಭಾರತದ ಪೊಲೀಸರಲ್ಲಿ ದೇಶಿ ರಾಜಪ್ರಭುತ್ವಗಳ ಕಾಲದ ಹಿಂಸೆ, ವಿದೇಶಿ ವಸಾಹತುಶಾಹಿ ಹಿಂಸೆಗಳೆರಡೂ ಬೆರೆತುಹೋಗಿದ್ದವು. ದೇಶದ ಬಿಡುಗಡೆಗಾಗಿ ಜೀವದ ಹಂಗು ತೊರೆದು ಹೋರಾಡುತ್ತಿದ್ದ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಇತರ ಘೋರಾಪರಾಧಿಗಳ ನಡುವೆ ವ್ಯತ್ಯಾಸವನ್ನೇ ಗುರುತಿಸಲಾರದಷ್ಟು ನಿರ್ದಯರಾಗಿದ್ದ ಈ ಪೊಲೀಸರಲ್ಲಿ ಹಿಂದೂ, ಮುಸ್ಲಿಂ, ಆದಿವಾಸಿಗಳು... ಎಲ್ಲರೂ ಇದ್ದರು.

ಲೋಹಿಯಾ ಕೊಟ್ಟ ಕೋರ್ಟ್ ಹೇಳಿಕೆಯಲ್ಲಿರುವ ಪೊಲೀಸ್ ಹಿಂಸೆಯ ಇನ್ನಿತರ ವಿವರಗಳು:

'ದೀಪಾವಳಿಯ ಹೊತ್ತಿಗೆ ನನ್ನನ್ನು ಲಾಹೋರ್ ಕೋಟೆಯ ಮತ್ತೊಂದು ಅಸಹ್ಯಕರ ಬಂದೀಖಾನೆಗೆ, ಅಲ್ಲಿಂದ ನೆಲಮಾಳಿಗೆಯ ಕಚೇರಿಗೆ ಕರೆದೊಯ್ದರು. 'ಇದು ಕೊಲೆಗಡುಕ ಕೈದಿಗಳ ಬಾಯಿ ಬಿಡಿಸುವ ಜಾಗ; ಎಂಥೆಂಥ ಖತರ್ನಾಕ್ ಅಪರಾಧಿಗಳು ಇಲ್ಲಿ ತತ್ತರಿಸಿ ಬಾಯಿ ಬಿಟ್ಟಿದ್ದಾರೆ ಗೊತ್ತ?' ಎಂದು ಹೆದರಿಸತೊಡಗಿದರು. ಅದು ಹೊಸ ಜಾಗ ಎಂಬುದನ್ನು ಬಿಟ್ಟರೆ, ಉಳಿದ ಮಾತುಗಳೆಲ್ಲ ನನಗೆ ರೂಢಿಯಾಗಿದ್ದವು. ನಿರಾಳನಾದೆ.

ಜೊತೆಗೆ, ಪುಸಲಾವಣೆಯೂ ಮುಂದುವರಿಯಿತು: ರೇಡಿಯೋ ಟ್ರಾನ್ಸ್‌ಮಿಟರ್‌ಗಳನ್ನು ಇಟ್ಟಿದ್ದ ಒಂದು ಜಾಗದ